# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2314** |
| ಸದಸ್ಯರ ಹೆಸರು | : | ಡಾ\|\| ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 27-03-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯ ಆರ್ಥಿಕತೆಯ ಬೆನ್ನೆಲುಬಾದ ತೊಗರಿ ಬೆಳೆಯನ್ನು ಜಿಲ್ಲೆಯಲ್ಲಿ ಪ್ರತಿ ವರ್ಷ ಎಷ್ಟು ಹೆಕ್ಟೇರ್‌ನಲ್ಲಿ ರೈತರು ಬೆಳೆಯುತ್ತಾರೆ; (ಎರಡು ವರ್ಷಗಳ ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ತೊಗರಿ ಬೆಳೆಯನ್ನು ಬೆಳೆದ ಪ್ರದೇಶದ ವಿಸ್ತೀರ್ಣವು ಈ ಕೆಳಗಿನಂತಿದೆ.<br>
<table>
<tr><th>ವರ್ಷ</th><th>ವಿಸ್ತೀರ್ಣ (ಹೆ.ಗಳಲ್ಲಿ)</th></tr>
<tr><td>2021-22</td><td>633798</td></tr>
<tr><td>2022-23</td><td>486238</td></tr>
<tr><td>2023-24</td><td>577430</td></tr>
<tr><td>2024-25</td><td>629925</td></tr>
<tr><td>2025-26</td><td>590599</td></tr>
</table>
(ಮೂಲ : 2021-22 ರಿಂದ 2025-26ನೇ ಸಾಲಿನವರೆಗೆ ಅಂತಿಮ ಅಂದಾಜು ವರದಿಯಂತೆ)</td></tr>
<tr><td>ಆ)</td><td>ಜಿಲ್ಲೆಯ ತೊಗರಿ ಬೆಳೆಗಾರರಿಗೆ ಉತ್ತೇಜನ ನೀಡಲು ಸ್ಥಾಪನೆಯಾದ ತೊಗರಿ ಮಂಡಳಿಗೆ ಒದಗಿಸಿದ ಸಿಬ್ಬಂದಿ ಮತ್ತು ಭೌತಿಕ ಸೌಕರ್ಯಗಳೇನು;</td><td>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯಲ್ಲಿ ಕೃಷಿ ಇಲಾಖೆಯಿಂದ ನಿಯೋಜನೆ ಮೇರೆಗೆ 04 ಅಧಿಕಾರಿ/ಸಿಬ್ಬಂದಿಗಳು ಹಾಗೂ ಹೊರಗುತ್ತಿಗೆ ಆಧಾರದ ಮೇಲೆ 09 ಸಿಬ್ಬಂದಿಗಳು ಸೇರಿದಂತೆ ಒಟ್ಟು 13 ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br>ಮಂಡಳಿಯು ಕೊಟ್ನೂರು (ಡಿ), ಕಲಬುರಗಿ ಜಿಲ್ಲೆಯಲ್ಲಿ ಸ್ವಂತ ಆಡಳಿತ ಕಚೇರಿ ಕಟ್ಟಡವನ್ನು ಹೊಂದಿರುತ್ತದೆ.</td></tr>
<tr><td>ಇ)</td><td>ಜಿಲ್ಲೆಯ ತೊಗರಿ ಬೆಳಗಾರರಿಗೆ ಉತ್ತೇಜನ ಮತ್ತು ಬೆಂಬಲ ನೀಡಲು ಸ್ಥಾಪನೆಯಾದ ತೊಗರಿ ಮಂಡಳಿ ರೋಗಗ್ರಸ್ಥವಾಗಿದ್ದು ಅದನ್ನು ಸುಧಾರಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ;</td><td>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಗೆ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ವಿಶಿಷ್ಟವಾದ ಭೌಗೋಳಿಕ ಸೂಚ್ಯಂಕ ಹೊಂದಿದ ತೊಗರಿಯನ್ನು GI ಅಡಿಯಲ್ಲಿ ನೋಂದಾಯಿತ ರೈತರಿಂದ ಖರೀದಿಸಿ, ಅವುಗಳನ್ನು ಸಂಸ್ಕರಿಸಿ, "ಭೀಮಾ ಪಲ್ಸಸ್ ಬ್ರಾಂಡ್ ನಡಿ ಮಾರಾಟ ಮಾಡುವ ಹೊಸ ಯೋಜನೆಯ ಅನುಷ್ಠಾನಕ್ಕಾಗಿ 2022-23ನೇ ಸಾಲಿನ</td></tr>
</table>

| | | |
|---|---|---|
| | | ಆಯವ್ಯಯದಲ್ಲಿ ರೂ.200.00ಲಕ್ಷ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ 2021-22ನೇ ಸಾಲಿನಿಂದ ಆಡಳಿತಾತ್ಮಕ ವೆಚ್ಚಕ್ಕಾಗಿ ಮಂಡಳಿಗೆ ಪ್ರತಿ ವರ್ಷ ರೂ.50.00ಲಕ್ಷ ಅನುದಾನ ರಾಜ್ಯ ಸರ್ಕಾರದಿಂದ ಒದಗಿಸಲಾಗಿರುತ್ತದೆ.<br>ದ್ವಿದಳಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ನಿರ್ಮಿಸಲಾಗುತ್ತಿದೆ.<br>ದ್ವಿದಳಧಾನ್ಯಗಳ ಸಂಗ್ರಹಣೆಗಾಗಿ 100 ಮೆಟ್ರಿಕ್ ಟನ್ ಸಾಮರ್ಥ್ಯದ 2 ಗೋದಾಮುಗಳನ್ನು ನಿರ್ಮಿಸಲಾಗುತ್ತಿದೆ. |
| ಈ) | ಉತ್ಕೃಷ್ಟ ತೊಗರಿ ಬೆಳೆಯುವ ಕಲಬುರಗಿ ಜಿಲ್ಲೆಗೆ ಒಂದು ಬ್ರಾಂಡಿಂಗ್ ಹಂತಕ್ಕೆ ಒಯ್ದು (GI Tag) ಅಲ್ಲಿನ ರೈತರ ಬದುಕಿಗೆ ಆಧಾರವಾಗಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ರೈತರಿಂದ ಹಾಗೂ ರೈತ ಉತ್ಪಾದಕರ ಸಂಸ್ಥೆಗಳಿಂದ ಭೌಗೋಳಿಕ ಸೂಚ್ಯಂಕ (GI) ಅಡಿಯಲ್ಲಿ ಪ್ರಮಾಣೀಕರಿಸಲಾದ ತೊಗರಿ ಖರೀದಿಸಿ, ಅವುಗಳ ಸಂಸ್ಕರಣೆ ಮಾಡಿ ಭೀಮಾ ಪಲ್ಸ್‌ಸ್ ಎಂಬ ಬ್ರ್ಯಾಂಡ್ ಹೆಸರಿನಲ್ಲಿ ಬ್ರ್ಯಾಂಡಿಂಗ್, ಮಾರ್ಕೆಟಿಂಗ್ ಮತ್ತು ಮೌಲ್ಯವರ್ಧನೆ ಮಾಡುವ ಮೂಲಕ ಜನಪ್ರಿಯಗೊಳಿಸುವ ಉದ್ದೇಶ ಹೊಂದಿದಲ್ಲದೇ, ಈ ಭಾಗದ ರೈತರಿಗೆ ಉತ್ತಮ ಬೆಲೆ ದೊರಕಿಸುವ ಉದ್ದೇಶವಾಗಿದೆ.<br>ಈ ನಿಟ್ಟಿನಲ್ಲಿ ಮಂಡಳಿಯ ವ್ಯಾಪ್ತಿಯಲ್ಲಿ ದ್ವಿದಳ ಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ನಿರ್ಮಿಸಲಾಗುತ್ತಿದೆ. |

*ಕೃಇ 95 ಎಎಂಎಸ್ 2026*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು